ಇ) ಈ ರಸ್ತೆಯ ಒಟ್ಟು 12.40 ಉದ್ದದಲ್ಲಿ 6.25 ಕಿಮೀ ಉದ್ದದಷ್ಟಕ್ಕೆ ಡಾಂಬರೀಕರಣವನ್ನು ಮಾಡಲಾಗಿದೆ. ಉಳಿದ 6.15 ಕಿಮೀ ಅನ್ನು ಅಭಿವೃದ್ಧಿ ಪಡಿಸಲು 10 ಲಕ್ಷ ರೂ. ಗಳ ಅಂದಾಜು ಆಗುತ್ತಿದ್ದು ಅನುದಾನ ಲಭ್ಯತೆಯನ್ನು ಅನುಸರಿಸಿ ಜಿಲ್ಲಾ ಪಂಚಾಯತ್‌ಯವರು ಹಂತ ಹಂತವಾಗಿ ಅಭಿವೃದ್ಧಿ ಕಾರ್ಯ ಕೈಗೊಳ್ಳುತ್ತಾರೆ.

ವಿಷಯ : ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಅತಿವೃಷ್ಟಿಯಿಂದ ರಸ್ತೆಗಳು ಕೊಚ್ಚಿಹೋಗಿರುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 368(125)

ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ)

ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಅತಿವೃಷ್ಟಿಯಿಂದ ತೀರ್ಥಹಳ್ಳಿ ತಾಲ್ಲೂಕಿನಾದ್ಯಂತ ಎಲ್ಲಾ ರಸ್ತೆಗಳು ಕೊಚ್ಚಿ ಹೋಗಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಸರ್ಕಾರ ಈ ಬಗ್ಗೆ ಯಾವ ಕ್ರಮಗಳನ್ನು ಕೈಗೊಂಡಿದೆ?

ಶ್ರೀ ಕೆ.ಹೆಚ್.ರಂಗನಾಥ್ (ಲೋಕೋಪಯೋಗಿ ಸಚಿವರು)

ಅ) ಹಲವಾರು ರಸ್ತೆಗಳಿಗೆ ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಆಧ್ಯತೆಯ ಆಧಾರದ ಮೇಲೆ ರಸ್ತೆಗಳನ್ನು ವಾಹನ ಸಂಚಾರಕ್ಕೆ ತೊಂದರೆಯಾಗದಂತೆ ತುರ್ತು ದುರಸ್ತಿ ಮಾಡಲಾಗುತ್ತಿದೆ. ಶಾಶ್ವತ ದುರಸ್ತಿಗಾಗಿ ಅತಿವೃಷ್ಟಿ ಪರಿಹಾರ ನಿಧಿಯಿಂದ ಅನುಧಾನಕ್ಕಾಗಿ ಕಂದಾಯ ಇಲಾಖೆಗೆ ಬೇಡಿಕೆ ಸಲ್ಲಿಸಿದೆ.

ವಿಷಯ : ಡಂಬಳ ಕೆರೆಯ ಹೂಳೆತ್ತುವ ಕೆಲಸದ ಅಂದಾಜು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 370 (472)

ಶ್ರೀ ಕೆ. ಹೆಚ್. ಕುರಡಗಿ (ಮುಂಡರಗಿ)

ಮಾನ್ಯ ಸಣ್ಣ ನೀರಾವರಿ ರಾಜ್ಯಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ಮುಂಡರಗಿ ತಾಲ್ಲೂಕು ಡಂಬಳ ಕೆರೆಯ ಹೂಳೆತ್ತುವ ಅಂದಾಜು ಎಷ್ಟು ; ಅದಕ್ಕೆ ಬಿಡುಗಡೆಯಾದ ಹಣವೆಷ್ಟು

ಆ. ಮುಂಡರಗಿ ತಾಲ್ಲೂಕಿನ ಜರತಲಿ ಶಿರೂರಿನ ಕೆರೆಯ ಹೂಳೆತ್ತುವ ಅಂದಾಜು ಎಷ್ಟು ಅದಕ್ಕೆ ಬಿಡುಗಡೆಯಾದ ಹಣವೆಷ್ಟು;

ಇ) ಮುಂಡರಗಿ ತಾಲ್ಲೂಕು ಹಾಲೂರು ಕೆರೆಯ ಹೂಳೆತ್ತುವ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎಂ.ಪಿ. ಕೇಶವ ಮೂರ್ತಿ (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ) ಅಂದಾಜು ಮೊತ್ತ 50.00 ಲಕ್ಷ ರೂ. ಗಳು ಬಿಡುಗಡೆಯಾದ ಹಣ 27.01 ಲಕ್ಷ ರೂ. ಗಳು

ಆ) ಅಂದಾಜು ಮೊತ್ತ : 40.00 ಲಕ್ಷ ರೂ. ಗಳು. ಬಿಡುಗಡೆಯಾದ ಹಣ : 14.1 4 ಲಕ್ಷ ರೂ. ಗಳು.

ಇ) ಈ ಕಾಮಗಾರಿಯನ್ನು ಆಯವ್ಯಯದಲ್ಲಿ ಸೇರಿದ ನಂತರ ಪರಿಗಣಿಸಲಾಗುವುದು.

ವಿಷಯ : ಮುಂಡಗಿರಿಯಿಂದ ಹಮ್ಮಿಗಿ ರಸ್ತೆ ಪೂರ್ಣ ದುರಸ್ಥಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 37 (475ಬಿ)

ಶ್ರೀ ಕೆ.ಹೆಚ್ ಕುರಡಗಿ (ಮುಂಡರಗಿ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮುಂಡರಗಿಯಿಂದ ಹಮ್ಮಿಗೆ ರಸ್ತೆ ಪೂರ್ಣ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಅದರ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಕೆ.ಹೆಚ್.ರಂಗನಾಥ್ (ಲೋಕೋಪಯೋಗಿ ಸಚಿವರು)

ಅ) ಮುಂಡರಗಿ - ಹಮ್ಮಿಗಿ ರಸ್ತೆ ಹದಗೆಟ್ಟಿರುವುದಿಲ್ಲ. ಈ ರಸ್ತೆಯನ್ನು ನಿರ್ವಹಣೆ ಮಾಡಲಾಗುತ್ತಿದ್ದು ಸುಸ್ಥಿತಿಯಲ್ಲಿ ಇಡಲಾಗಿದೆ.

ವಿಷಯ : ಮೇವುಂಡಿ ಗ್ರಾಮದ ಹಳ್ಳ ತುಂಬಿ ಹರಿಯುತ್ತಿರುವುದರಿಂದ ಸಂಪರ್ಕ ಕಡಿತ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 372(475ಎ)

ಶ್ರೀ ಕೆ.ಎಚ್. ಕುರಡಗಿ (ಮುಂಡರಗಿ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮುಂಡರಗಿ ತಾಲ್ಲೂಕಿನಲ್ಲಿ ಮೇವುಂಡಿ ಗ್ರಾಮದ ಹಳ್ಳ ತುಂಬಿ ಹರಿಯುವುದರಿಂದ ಗದಗ ಮತ್ತು ಮುಂಡರಗಿಯ ಸಂಪರ್ಕ ಕಳೆದು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಅದರ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ.

ಆ) ಮುಂಡರಗಿಯಿಂದ ಹಮ್ಮಿಗಿ ರಸ್ತೆ ಪೂರ್ಣ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಅದರ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ?